**JUNE 26, 2026**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

<><><>

- **ಇಂದು, ವಿಶ್ವ, ಮಾದಕ ದ್ರವ್ಯಗಳ ದುರುಪಯೋಗ** ಮತ್ತು ಅಕ್ರಮಸಾಗಣೆ ವಿರೋಧಿ, ಯುವಜನ ಜಾಗೃತಿ, ದಿನಾಚರಣೆ
- **ದೇಶದ ಜಲಮೂಲಗಳ ಸಂರಕ್ಷಣೆ;** ರೈತರಿಗಾಗಿ, ವಿಶ್ವಾಸಾರ್ಹ ನೀರಾವರಿ ಸೌಲಭ್ಯ, ಕೇಂದ್ರ ಸರ್ಕಾರದ ಗುರಿ.
- **ರಾಜ್ಯದ ಮಳೆ ಅಭಾವದ ಜಿಲ್ಲೆಗಳಲ್ಲಿ,** ಮೋಡ ಬಿತ್ತನೆಗೆ, ತಜ್ಞರೊಂದಿಗೆ ಸಚಿವ ಎಂ.ಬಿ. ಪಾಟೀಲ, ಶೀಘ್ರ ಸಮಾಲೋಚನೆ.
- **'ವಿಕಸಿತ ಭಾರತ 2047' ಸಂಕಲ್ಪ;** ಯುವಜನರ ಕೊಡುಗೆ ಗಣನೀಯ – ರಾಜ್ಯಪಾಲರ, ಅಭಿಮತ.

<><><>

**ಈಗ ವಾರ್ತೆಗಳ ವಿವರ**

<><><>

**"ಸಾಕ್ಷ್ಯವು ಸ್ಪ ್ಟವಾಗಿದೆ; ತಡೆಗಟ್ಟುವಿಕೆಯಲ್ಲಿ ಹೂಡಿಕೆ ಮಾಡಿ"** ಎಂಬ, ವಿಷಯ ಆಧರಿಸಿ, ಇಂದು, ವಿಶ್ವ ಮಾದಕ ದ್ರವ್ಯಗಳ ದುರುಪಯೋಗ ಮತ್ತು ಅಕ್ರಮಸಾಗಣೆ ವಿರೋಧಿ ದಿನವನ್ನು ಆಚರಿಸಲಾಗುತ್ತಿದೆ. "ನಿರಂತರವಾಗಿರುವ ಮಾದಕ ವಸ್ತು ವ್ಯಸನದ ಸಮಸ್ಯೆಗಳು; ಹೊಸ ಸವಾಲುಗಳು ಮತ್ತು ನವೀನ ಪರಿಹಾರಗಳು" ಧ್ಯೇಯದೊಂದಿಗೆ, ಅಕ್ರಮ ಮಾದಕ ದ್ರವ್ಯಗಳ ಬಳಕೆ ಮತ್ತು ಸಾಗಣೆಯ ಪ್ರಮುಖ ಸಮಸ್ಯೆಗಳ ಬಗ್ಗೆ, ಜನ ಜಾಗೃತಿ ಮೂಡಿಸುವ ಗುರಿ ವಿಶ್ವಸಂಸ್ಥೆ ಹೊಂದಿದೆ.

<><><>

**ಮಾದಕ ದ್ರವ್ಯಗಳ ದುರುಪಯೋಗವಿಲ್ಲದ ಸಮಾಜವನ್ನು ರೂಪಿಸಲು,** ಸಮಾಜದ ಸಹಕಾರವನ್ನು ಬಲಪಡಿಸುವ ಗುರಿಯೊಂದಿಗೆ, 1987ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆ, ವಿಶ್ವ ಮಾದಕ ದ್ರವ್ಯಗಳ ದುರುಪಯೋಗ ಮತ್ತು ಅಕ್ರಮಸಾಗಣೆ ವಿರೋಧಿ ದಿನಾಚರಣೆಗೆ, ನಿರ್ಧರಿಸಿತು.

<><><>

***ಯುನೈಟೆಡ್ ನೇ ಸ್ಸ್ ಆಫೀಸ್ ಆನ್ ಡ್ರಗ್ಸ್ ಅಂಡ್ ಕ್ರೈಮ್,*** ಮಾದಕ ದ್ರವ್ಯಗಳ ದುರುಪಯೋಗ ಪ್ರಾರಂಭವಾಗುವ ಮೊದಲು, ಅದನ್ನು ತಡೆದು, ವ್ಯಸನ ಮತ್ತು ಸಂಘಟಿತ ಅಪರಾಧದ ಚಕ್ರವನ್ನು ಮುರಿಯಲು, ತಂತ್ರ ಆಧಾರಿತ ಸಾಮುದಾಯಿಕ ಸಹಭಾಗಿತ್ವದ ಕ್ರಮಗಳನ್ನು, ಪ್ರೇರೇಪಿಸುತ್ತಿದೆ.

<><><>

**ಧಾರವಾಡದ ಮನೋ ಆರೋಗ್ಯ ಹಾಗೂ** ನರವಿಜ್ಞಾನಗಳ ಸಂಸ್ಥೆ – 'ಡಿಮ್ಹಾನ್ಸ್' ವ್ಯಸನ ಮುಕ್ತಿ ಕೇಂದ್ರದ ಮುಖ್ಯಸ್ಥ ಹಾಗೂ ಖ್ಯಾತ ಮನೋ ಆರೋಗ್ಯ ತಜ್ಞ, ಡಾಕ್ಟರ್ ಮಹೇಶ ಮಹಾದೇವಯ್ಯ, ಮಾದಕ ದ್ರವ್ಯಗಳ ವ್ಯಸನದ ಪರಿಣಾಮಗಳ ಕುರಿತು ಹಾಗೂ ಡಿಮ್ಹಾನ್ಸ್ ಸಂಸ್ಥೆಯಲ್ಲಿ ಲಭ್ಯ, ವ್ಯಸನಮುಕ್ತಿ ಚಿಕಿತ್ಸೆ, ಆರೈಕೆ ಮತ್ತು ಪುನರ್ವಸತಿ ಸೌಲಭ್ಯಗಳ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಡಾ. ಮಹೇಶ ಮಹಾದೇವಯ್ಯ ಧ್ವನಿ 65 ಸೆಕೆಂದುಗಳು**

<><><>

**ಧಾರವಾಡ ಜಿಲ್ಲೆ ಪ್ರಧಾನ ನ್ಯಾಯಾಧೀಶ ಹಾಗೂ** ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಎನ್.ವಿ.ವಿಜಯ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಲ್ಲಪ್ಪ ಬಡಿಗೇರ, ಮಾದಕ ದ್ರವ್ಯಗಳ ದುರುಪಯೋಗ ಮತ್ತು ಅಕ್ರಮ ಸಾಗಣೆ ವಿರೋಧಿ ದಿನಾಚರಣೆ ಅಂಗವಾಗಿ, ಜಿಲ್ಲೆಯ ಯುವಜನರಲ್ಲಿ ಅರಿವು ಮೂಡಿಸುವ ಜಾಗೃತಿ ಶಿಬಿರಗಳನ್ನು ಸಂಘಟಿಸಲಾಗಿದೆ ಎಂದು, ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ವಿವರ ನೀಡಿದ್ದಾರೆ, ಕಾನೂನು ಸೇವೆಗಳ ಪ್ರಾಧಿಕಾರದ, ಅಶ್ವಿನಿ.

<><><>

**ಅಶ್ವಿನಿ ಧ್ವನಿ 45 ಸೆಕೆಂದುಗಳು**

<><><>

**ಕೇಂದ್ರ ಗೃಹ ಖಾತೆ ಸಚಿವ ಅಮಿತ ಶಾ ಅಧ್ಯಕ್ಷತೆಯಲ್ಲಿ,** ಮಾದಕ ದ್ರವ್ಯ ಮಾರಾಟ ಹಾಗೂ ಬಳಕೆಯನ್ನು, ತಡೆಗಟ್ಟುವ ಪ್ರಯತ್ನಗಳನ್ನು ಬಲಪಡಿಸಲು, ಇಂದು, ಹೊಸ ದಿಲ್ಲಿಯಲ್ಲಿ, ಉನ್ನತ ಮಟ್ಟದ ಸಭೆ ನಡೆಯಲಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಮಾದಕ ವಸ್ತು ಮಾರಾಟ ತಡೆಗಟ್ಟುವಲ್ಲಿ ಕಾರ್ಯನಿರ್ವಹಿಸುತ್ತಿರುವ ಏಜೆನ್ಸಿಗಳ ಪ್ರತಿನಿಧಿಗಳು, ಈ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು, ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಈ ಸಂದರ್ಭದಲ್ಲಿ, ಅಮಿತ ಶಾ ಅವರು, ಮಾದಕ ದ್ರವ್ಯ ನಿಯಂತ್ರಣ ಉಪಕ್ರಮ ಪತ್ರ 2026–2029 ನ್ನು ಬಿಡುಗಡೆ ಮಾಡಲಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(37 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**"ದೇಶದ ಪ್ರತಿಯೊಂದು ಹನಿ ನೀರಿನ ಸಮರ್ಪಕ ಬಳಕೆ,** ಜಲ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಅಣೆಕಟ್ಟೆಗಳ ಹೂಳೆತ್ತಿ, ರೈತರಿಗೆ ವಿಶ್ವಾಸಾರ್ಹ ನೀರಾವರಿ ಸೌಲಭ್ಯ ಕಲ್ಪಿಸುವುದು, ಕೇಂದ್ರ ಸರ್ಕಾರದ ಪ್ರಮುಖ ಗುರಿ" ಎಂದು, ಕೇಂದ್ರ ಜಲಶಕ್ತಿ ಖಾತೆ ಸಚಿವ ಸಿ.ಆರ್. ಪಾಟೀಲ, ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆ, ತುಂಗಭದ್ರಾ ಅಣೆಕಟ್ಟೆಗೆ ನೂತನವಾಗಿ ಅಳವಡಿಸಲಾದ, 33 ಹೊಸ ಜಲ ಹೊರಸೂಸು ದ್ವಾರಗಳ ಲೋಕಾರ್ಪಣೆ ಸಮಾರಂಭದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಕೇಂದ್ರ ಸರ್ಕಾರ, ದೇಶದ ಜಲ ಭದ್ರತೆಯನ್ನು ಬಲಪಡಿಸಿ, ನೀರಾವರಿ ಸಾಮರ್ಥ್ಯ ವೃದ್ಧಿಸುವತ್ತ ಗಮನ ಹರಿಸಿದೆ. ರೈತರ ಹಿತಾಸಕ್ತಿ ಕಾಪಾಡಲು, ಆಧುನಿಕ ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು.

<><><>

**ಮುಖ್ಯಮಂತ್ರಿಗಳಾದ, ಡಿ.ಕೆ. ಶಿವಕುಮಾರ,** ಎನ್. ಚಂದ್ರಬಾಬು ನಾಯ್ಡು ಮತ್ತು ಎ. ರೇವಂತ ರೆಡ್ಡಿ ಅವರೊಂದಿಗೆ, ಕೇಂದ್ರ ಜಲಶಕ್ತಿ ಸಚಿವಾಲಯಕ್ಕೆ ಸಂಬಂಧಿಸಿದ, ವಿವಿಧ ವಿ ‘ಯಗಳ ಕುರಿತು, ಮಹತ್ವದ ಚರ್ಚೆ ನಡೆಸಿದ್ದಾಗಿ, ಸಚಿವ ಸಿ.ಆರ್. ಪಾಟೀಲ ಹೇಳಿದರು.

<><><>

**ರಾಜ್ಯದಲ್ಲಿ ಮಳೆ ಅಭಾವದಿಂದ,** ರೈತರು ಸಂಕ ‘ಟಕ್ಕೆ ಸಿಲುಕಿದ್ದು, ಜುಲೈ ಎರಡನೇ ವಾರದಲ್ಲಿ ಉತ್ತಮ ಮಳೆಯಾಗುವ ಸಾಧ್ಯತೆ ಇದೆ; ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ, ಮೋಡ ಬಿತ್ತನೆ ಬಗ್ಗೆ ಯೋಜಿಸಲಾಗುವುದು ಎಂದು, ವಿಜಯಪುರ, ಬಾಗಲಕೋಟೆ ಜಿಲ್ಲೆಗಳ, ನೆರೆ–ಬರ ತಾತ್ಕಾಲಿಕ ಉಸ್ತುವಾರಿ ಸಚಿವ, ಎಂ.ಬಿ. ಪಾಟೀಲ ತಿಳಿಸಿದ್ದಾರೆ. ವಿಜಯಪುರದಲ್ಲಿ ಮಾತನಾಡಿದ ಸಚಿವರು, ಹವಾಮಾನ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ, ರಾಜ್ಯದ ಮಳೆ ಕೊರತೆ ಪ್ರದೇಶಗಳಲ್ಲಿ, ಮೋಡ ಬಿತ್ತನೆ ಸಾಧ್ಯತೆ ಹಾಗೂ ಪರಿಣಾಮಗಳ ಬಗ್ಗೆ, ತಜ್ಞರ ಸಲಹೆ ಪಡೆದು, ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು. ರೈತರು ಆತಂಕ ಪಡುವ ಅವಶ್ಯಕತೆ ಇಲ್ಲ, ಎಂದು, ಭರವಸೆ ನೀಡಿದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು** ಪ್ರತಿಪಾದಿಸಿರುವ, ‘ವಿಕಸಿತ ಭಾರತ 2047’ರ ಸಂಕಲ್ಪವನ್ನು ಸಾಕಾರಗೊಳಿಸುವಲ್ಲಿ, ಯುವಜನರ ಪಾತ್ರ ಮಹತ್ವದ್ದು ಎಂದು, ರಾಜ್ಯಪಾಲ ಥಾವರಚಂದ ಗೆಹ್ಲೋಟ, ಅವರು ಹೇಳಿದ್ದಾರೆ. ಬೆಂಗಳೂರಿನ ಎಂ.ಇ.ಎಸ್. ಸ್ವಾಯತ್ತ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ, “ಅಭಿವೃದ್ಧಿ ಹೊಂದಿದ ಭಾರತ 2047; ಸ್ವಯಂ ಸಾಕ್ಷಾತ್ಕಾರದಿಂದ ರಾಷ್ಟ್ರೀಯತೆಯ ವರೆಗೆ” ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ರಾಷ್ಟ್ರೀಯ ಶಿಕ್ಷಣ ನೀತಿ–2020 ಬಹುಶಿಸ್ತೀಯ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿದ್ದು, ವಿದ್ಯಾರ್ಥಿಗಳನ್ನು ವಿ ‘ಯಗಳ ಮಿತಿಗಳಿಂದ ಹೊರತಂದು, ಸಮಗ್ರ ವ್ಯಕ್ತಿತ್ವ ರೂಪಿಸುವ ಗುರಿಯನ್ನು ಹೊಂದಿದೆ ಎಂದರು.

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ,** ಕೇಂದ್ರದ ಎನ್.ಡಿ.ಎ. ಸರ್ಕಾರ, 12 ವ ‘ಗಳ ಅಧಿಕಾರಾವಧಿ ಪೂರ್ಣಗೊಳಿಸಿದ್ದು, ಸಾಧನೆಗಳ ಹೊತ್ತಗೆಯನ್ನು, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದ, ಗೋವಿಂದ ಕಾರಜೋಳ, ಬಿಡುಗಡೆ ಮಾಡಿದರು. ಚಿತ್ರದುರ್ಗದ, ಧವಳಗಿರಿಯ, ಶ್ರೀ ಕ್ಷಿಪ್ರ ಪ್ರಸಾದ ಗಣಪತಿ ದೇವಾಲಯದಲ್ಲಿ, ಪೂಜೆ ಸಲ್ಲಿಸಿ, ಹೊತ್ತಗೆಯನ್ನು ಮನೆ–ಮನೆಗೆ ತಲುಪಿಸುವ ಕಾರ್ಯಕ್ಕೆ, ಅವರು ಚಾಲನೆ ನೀಡಿದರು. ಕೇಂದ್ರ ಸರ್ಕಾರದ ಜನಪರ ಯೋಜನೆಗಳ ಮಾಹಿತಿಯನ್ನು, ಶ್ರೀ ಸಾಮಾನ್ಯರಿಗೆ ತಲುಪಿಸುವಂತೆ ಅವರು, ಕಾರ್ಯಕರ್ತರಿಗೆ ಸೂಚಿಸಿದರು.

<><><>

**ಹಿಂದು–ಮುಸ್ಲಿಂ ಭಾವೈಕ್ಯತೆ** ಹಾಗೂ ತ್ಯಾಗ–ಬಲಿದಾನದ ದ್ಯೋತಕವಾಗಿ, ಮೊಹರಂ ತಿಂಗಳ ಕೊನೆಯ, ಮತ್ತು ಅತ್ಯಂತ ಪ್ರಮುಖ ದಿನ ಅಶುರಾವನ್ನು ಇಂದು ಆಚರಿಸಲಾಗುತ್ತಿದೆ. ಕರ್ಬಾಲಾ ಕದನದಲ್ಲಿ, ಇಮಾಮ್ ಹುಸೇನ್ ಅವರ ಹುತಾತ್ಮಗೊಂಡ, ಈ ದಿನವನ್ನು, ದೇಶಾದ್ಯಂತ ಶೋಕದ ದಿನವಾಗಿ, ಪರಿಗಣಿಸಲಾಗುತ್ತದೆ. ಇಸ್ಲಾಮಿಕ್ ಕ್ಯಾಲೆಂಡರ್‌ನ, ಮೊದಲ ತಿಂಗಳಾದ ಮೊಹರಂನ, 10ನೇ ದಿನವನ್ನು ಅಶುರಾ ಎಂದು ಕರೆಯಲಾಗುತ್ತದೆ. ಈ ದಿನದಂದು ಉಪವಾಸ ಹಾಗೂ ಪ್ರಾರ್ಥನಾ ಮಂದಿರಗಳಲ್ಲಿ, ವಿಶೇ ‘ ಪ್ರಾರ್ಥನೆ ಸಲ್ಲಿಸಲಾಗುತ್ತಿದೆ. ಧಾರವಾಡ–ಹುಬ್ಬಳ್ಳಿ ಸೇರಿದಂತೆ, ಅನೇಕ ಕಡೆಗಳಲ್ಲಿ ನಿನ್ನೆ, ಪಂಜಾಗಳ ಮೆರವಣಿಗೆ, ಕೆಂಡ ಹಾಯುವ ಸಂಪ್ರದಾಯ ಪಾಲಿಸಲಾಯಿತು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇಂದು, ವಿಶ್ವ ಮಾದಕ ದ್ರವ್ಯಗಳ ದುರುಪಯೋಗ** ಮತ್ತು ಅಕ್ರಮಸಾಗಣೆ ವಿರೋಧಿ, ಯುವಜನ ಜಾಗೃತಿ, ದಿನಾಚರಣೆ
- **ದೇಶದ ಜಲಮೂಲಗಳ ಸಂರಕ್ಷಣೆ;** ರೈತರಿಗಾಗಿ, ವಿಶ್ವಾಸಾರ್ಹ ನೀರಾವರಿ ಸೌಲಭ್ಯ, ಕೇಂದ್ರ ಸರ್ಕಾರದ ಗುರಿ.
- **ರಾಜ್ಯದ ಮಳೆ ಅಭಾವದ ಜಿಲ್ಲೆಗಳಲ್ಲಿ,** ಮೋಡ ಬಿತ್ತನೆಗೆ, ತಜ್ಞರೊಂದಿಗೆ ಸಚಿವ ಎಂ.ಬಿ. ಪಾಟೀಲ, ಶೀಘ್ರ ಸಮಾಲೋಚನೆ.

- **‘ವಿಕಸಿತ ಭಾರತ 2047’ ಸಂಕಲ್ಪ;** ಯುವಜನರ ಕೊಡುಗೆ ಗಣನೀಯ – ರಾಜ್ಯಪಾಲರ, ಅಭಿಮತ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>